Akashvani: Bangalore
National Bulletin In Kannada
27.11.2026: 13.10hrs
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
27.11.2026: 13.10hrs
****

ಮುಖ್ಯಾಂಶಗಳು :

1. ರಾಷ್ಟ್ರಪತಿ ದ್ರೌಪದಿ ಮುರ್ಮು ೨ ದಿನಗಳ ಪ್ರವಾಸಕ್ಕಾಗಿ ಇಂದು ಕೇರಳಂಗೆ ಭೇಟಿ; ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿ
2. ಅಂತಿಮ ಹಂತಕ್ಕೆ ಭಾರತ-ಅಮೆರಿಕ ವ್ಯಾಪಾರ ಒಪ್ಪಂದ; ಭಾರತ-ಐರೋಪ್ಯ ಒಕ್ಕೂಟ ಮುಕ್ತ ವ್ಯಾಪಾರ ಒಪ್ಪಂದ ಮಾರ್ಚ್ ವೇಳೆಗೆ ಜಾರಿ: ಸಚಿವ ಪಿಯೂಶ್ ಗೋಯಲ್ ವಿಶ್ವಾಸ
3. ೫೭ನೇ ಭಾರತ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ: ಇಂದು ಗಣ್ಯರೊಂದಿಗೆ ಸಂವಾದ, ಚಲನಚಿತ್ರ ನಿರ್ದೇಶಕರ ಜತೆ ಮಾತುಕತೆ
4. ಭಾರತ - ನ್ಯೂಜಿಲೆಂಡ್ ಎರಡನೇ ಟೆಸ್ಟ್ ಕ್ರಿಕೆಟ್ ಪಂದ್ಯ; ಮೊದಲ ದಿನದಾಟದಂತ್ಯಕ್ಕೆ ನ್ಯೂಜಿಲೆಂಡ್ ೫ ವಿಕೆಟ್ ಗೆ ೨೪೬ ರನ್
5. ಮಹಿಳೆಯರ ಏಷ್ಯನ್ ಹಾಕಿ ಚಾಂಪಿಯನ್ಸ್ ಟ್ರೋಫಿ; ಸೆಮಿಫೈನಲ್ ನಲ್ಲಿ ಭಾರತಕ್ಕೆ ಇಂದು ಮಲೇಷ್ಯಾ ಸವಾಲು

****

ಎರಡು ದಿನಗಳ ಭೇಟಿಗಾಗಿ ಕೇರಳಂಗೆ ಆಗಮಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಇಂದು ಕೊಚ್ಚಿನ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅದ್ಧೂರಿ ಸ್ವಾಗತ ನೀಡಲಾಯಿತು. ಕೇರಳಂ ರಾಜ್ಯಪಾಲ ಓಂ ಪ್ರಕಾಶ್ ಮಾಥುರ್, ಮುಖ್ಯಮಂತ್ರಿ ವಿ.ಡಿ. ಸತೀಶನ್ ಸೇರಿದಂತೆ ಹಲವು ಗಣ್ಯರು ವಿಮಾನ ನಿಲ್ದಾಣದಲ್ಲಿ ರಾಷ್ಟ್ರಪತಿ ಅವರನ್ನು ಸ್ವಾಗತಿಸಿದರು. ಬಳಿಕ ರಾಷ್ಟ್ರಪತಿ ಆದಿ ಶಂಕರಾಚಾರ್ಯರ ಜನ್ಮಸ್ಥಳಕ್ಕೆ ಭೇಟಿ ನೀಡಲು ಕಾಲಡಿಗೆ ಪ್ರಯಾಣ ಬೆಳೆಸಿದರು. ನಾಳೆಯೂ ಸಹ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.

****

ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಒಪ್ಪಂದಕ್ಕೆ ಅಂತಿಮ ರೂಪ ನೀಡಲಾಗುತ್ತಿದ್ದು, ಒಪ್ಪಂದ ಶೀಘ್ರದಲ್ಲೇ ಪೂರ್ಣಗೊಳ್ಳುವ ಹಂತದಲ್ಲಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ತಿಳಿಸಿದ್ದಾರೆ. ನವದೆಹಲಿನಲ್ಲಿ ಇಂದು ನಡೆದ ಇಂಡಿಯಾ ಡೆಟ್ ಕ್ಯಾಪಿಟಲ್ ಮಾರ್ಕೆಟ್ ಶೃಂಗಸಭೆಯಲ್ಲಿ ವರ್ಚುವಲ್ ಮೂಲಕ ಮಾತನಾಡಿದ ಅವರು, ಕೆಲವು ಪ್ರಕ್ರಿಯೆಗಳ ಕಾರಣದಿಂದ ದ್ವಿಪಕ್ಷೀಯ ಒಪ್ಪಂದ ವಿಳಂಬವಾಗಿತ್ತು. ಈಗ ಅಂತಿಮ ಹಂತ ತಲುಪಿದೆ ಎಂದು ಹೇಳಿದ್ದಾರೆ. ಭಾರತ ಮತ್ತು ಯುರೋಪಿಯನ್ ಒಕ್ಕೂಟದ ನಡುವಿನ ಮುಕ್ತ ವ್ಯಾಪಾರ ಒಪ್ಪಂದ ಈ ವರ್ಷದ ಅಂತ್ಯದ ವೇಳೆಗೆ ಅಂತಿಮಗೊಂಡು ಸಹಿ ಬೀಳುವ ನಿರೀಕ್ಷೆಯಿದೆ. ಮುಂದಿನ ವರ್ಷ ಮಾರ್ಚ್ ಅಥವಾ ಏಪ್ರಿಲ್ ವೇಳೆಗೆ ಈ ಒಪ್ಪಂದ ಜಾರಿಯಾಗಬಹುದು ಎಂದು ಸಚಿವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

****

ಗೋವಾದಲ್ಲಿ ನಡೆಯುತ್ತಿರುವ ೫೬ನೇ ಭಾರತ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಇಂದು ಎಂಟನೇ ದಿನಕ್ಕೆ ಕಾಲಿಟ್ಟಿದೆ. ಖ್ಯಾತ ಗಣ್ಯರೊಂದಿಗೆ ಸಂವಾದ, ಚಲನಚಿತ್ರ ನಿರ್ದೇಶಕರೊಂದಿಗೆ ಮಾತುಕತೆ ಹಾಗೂ ವೈವಿಧ್ಯಮಯ ಚಿತ್ರಗಳ ಪ್ರದರ್ಶನಗಳು ಉತ್ಸವದ ಮೆರುಗು ಹೆಚ್ಚಿಸಿವೆ. ವಿಶ್ವದ ಖ್ಯಾತ ಚಲನಚಿತ್ರ ನಿರ್ದೇಶಕರು, ಉದಯೋನ್ಮುಖ ಪ್ರತಿಭೆಗಳು ಹಾಗೂ ಚಿತ್ರಾಸಕ್ತರನ್ನು ಚಿತ್ರೋತ್ಸವವು ಒಂದೆಡೆ ಸೇರಿಸಿದೆ. ಇಂದು ಫರ್ಹಾನ್ ಅಖ್ತರ್, ಅಶುತೋಷ್ ಗೌರಿಕರ್ ಮತ್ತು ಮಧುರ್ ಭಂಡಾರ್ಕರ್ ಅವರ ವಿಶೇಷ ಸಂವಾದ ಕಾರ್ಯಕ್ರಮ ನಡೆಯಲಿದೆ. ಅಲ್ಲದೆ, ಬಹು ನಿರೀಕ್ಷಿತ ಪಂಚಾಯತ್ ಐದನೇ ಸರಣಿಯ ಮೊದಲ ಸಂಚಿಕೆಯ ಪ್ರದರ್ಶನವೂ ಇಂದಿನ ಪ್ರಮುಖ ಆಕರ್ಷಣೆಯಾಗಿದೆ.

****

ಭಾರತ ಮತ್ತು ಯುಎಇ, ಮುಂದಿನ ತಲೆಮಾರಿನ ರಕ್ಷಣಾ ಉಪಕರಣಗಳ ಜಂಟಿ ಅಭಿವೃದ್ಧಿ ಮತ್ತು ಉತ್ಪಾದನೆಗೆ ವೇಗ ನೀಡಲು ಒಪ್ಪಿಕೊಂಡಿವೆ.ಅಬುಧಾಬಿಯಲ್ಲಿ ನಿನ್ನೆ ನಡೆದ ಭಾರತ-ಯುಎಇ ಜಂಟಿ ರಕ್ಷಣಾ ಸಹಕಾರ ಸಮಿತಿಯ ೧೪ನೇ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಭಾರತದ ರಕ್ಷಣಾ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ಮತ್ತು ಯುಎಇ ರಕ್ಷಣಾ ಸಚಿವಾಲಯದ ಅಂಡರ್ ಸೆಕ್ರೆಟರಿ ಲೆಫ್ಟಿನೆಂಟ್ ಜನರಲ್ ಇಬ್ರಾಹಿಂ ನಾಸಿರ್ ಎಂ. ಅಲ್ ಅಲಾವಿ ಸಭೆಯ ಸಹ ಅಧ್ಯಕ್ಷತೆ ವಹಿಸಿದ್ದರು. ರಕ್ಷಣಾ ಉದ್ಯಮ, ಕೃತಕ ಬುದ್ಧಿಮತ್ತೆ, ಸೈಬರ್ ಭದ್ರತೆ, ಸುಧಾರಿತ ತಂತ್ರಜ್ಞಾನ, ಸೇನಾ ತರಬೇತಿ ಹಾಗೂ ಕಡಲ ಭದ್ರತೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಹಕಾರ ಬಲಪಡಿಸಲು ಉಭಯ ದೇಶಗಳು ಒಪ್ಪಿಕೊಂಡಿವೆ. ಮುಂದಿನ ಸಭೆಗೂ ಮುನ್ನ ರಕ್ಷಣಾ ಸಹಕಾರದ ಪ್ರಗತಿಯನ್ನು ನಿಯಮಿತವಾಗಿ ಪರಿಶೀಲಿಸಲು ನಿರ್ಧರಿಸಿವೆ.

****

ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ, ಬಾಲ್ಯವಿವಾಹ ಮುಕ್ತ ಭಾರತ ಅಭಿಯಾನದ ಅಂಗವಾಗಿ ಇಂದು ನವದೆಹಲಿಯಲ್ಲಿ ರಾಷ್ಟ್ರೀಯ ಮಟ್ಟದ ಕಾರ್ಯಕ್ರಮ ಆಯೋಜಿಸಿದೆ. ಸರ್ಕಾರದ ಎಲ್ಲ ಇಲಾಖೆಗಳು ಹಾಗೂ ಸಮಾಜದ ಎಲ್ಲ ವರ್ಗಗಳ ಸಹಭಾಗಿತ್ವದ ಮೂಲಕ ಬಾಲ್ಯವಿವಾಹವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಉದ್ದೇಶವನ್ನು ಈ ಅಭಿಯಾನ ಹೊಂದಿದೆ. ೨೦೨೪ರ ನವೆಂಬರ್ ೨೭ರಂದು ಆರಂಭಿಸಲಾದ ರಾಷ್ಟ್ರೀಯ ಅಭಿಯಾನದ ಎರಡನೇ ವಾರ್ಷಿಕೋತ್ಸವದ ಅಂಗವಾಗಿ ಈ ಕಾರ್ಯಕ್ರಮ ನಡೆಯುತ್ತಿದೆ.

****

ನವದೆಹಲಿಯ ಭಾರತ್ ಮಂಟಪಂನಲ್ಲಿ ನಡೆಯುತ್ತಿರುವ ೪೫ನೇ ಭಾರತ ಅಂತಾರಾಷ್ಟ್ರೀಯ ವ್ಯಾಪಾರ ಮೇಳ-೨೦೨೬ ಇಂದು ಸಮಾಪನಗೊಳ್ಳಲಿದೆ. ಭಾರತ ವ್ಯಾಪಾರ ಉತ್ತೇಜನ ಸಂಸ್ಥೆ ಪ್ರತಿವರ್ಷ ಆಯೋಜಿಸುವ ಈ ಮೇಳವು ದೇಶದ ಪ್ರಮುಖ ಬಹು ಉತ್ಪನ್ನಗಳ ವ್ಯಾಪಾರ ಪ್ರದರ್ಶನಗಳಲ್ಲಿ ಒಂದಾಗಿದೆ. ಈ ವರ್ಷದ ಮೇಳಕ್ಕೆ ‘ವಿಕಾಸ್ ಔರ್ ವಿರಾಸತ್’ ಎಂಬುದು ಘೋಷವಾಕ್ಯವಾಗಿದೆ. ಮೇಳದಲ್ಲಿ ಭಾಗವಹಿಸಿರುವ ರಾಜ್ಯಗಳು ಮತ್ತು ಪ್ರದರ್ಶಕರ ಅತ್ಯುತ್ತಮ ಮಳಿಗೆ ಹಾಗೂ ಪ್ರಸ್ತುತಿಗಳನ್ನು ಗುರುತಿಸಿ ನಿನ್ನೆ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿತ್ತು. ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ವಿಭಾಗದಲ್ಲಿ ತಮಿಳುನಾಡು ಚಿನ್ನದ ಪದಕ, ಕೇರಳ ಬೆಳ್ಳಿ ಪದಕ ಹಾಗೂ ಮಧ್ಯಪ್ರದೇಶ ಕಂಚಿನ ಪದಕ ಪಡೆದುಕೊಂಡಿವೆ. ತ್ರಿಪುರ ರಾಜ್ಯಕ್ಕೆ ಮೆಚ್ಚುಗೆ ಪ್ರಶಸ್ತಿ ಲಭಿಸಿದೆ.

****

ರಕ್ಷಣಾ ಸಚಿವ ಹಾಗೂ ಬಿಜೆಪಿ ಹಿರಿಯ ನಾಯಕ ರಾಜನಾಥ್ ಸಿಂಗ್, ನಾಳೆ ಜಮ್ಮುವಿನಲ್ಲಿ ಬಿಜೆಪಿ ಆಯೋಜಿಸಿರುವ 'ಪ್ರಜಾಪ್ರಭುತ್ವ ಉಳಿಸಿ, ಅರಾಜಕತೆ ತೊಲಗಿಸಿ' ಪಾದಯಾತ್ರೆಗೆ ಚಾಲನೆ ನೀಡಲಿದ್ದಾರೆ. ಬೆಳಗ್ಗೆ ೧೦ ಗಂಟೆಗೆ ಪಂಜಿರ್ಥಿ ರೆಡಿಯೊ ನಿಲ್ದಾಣದಿಂದ ಆರಂಭವಾಗುವ ಪಾದಯಾತ್ರೆ, ಪರೇಡ್ ಮೈದಾನದಲ್ಲಿ ಸಾರ್ವಜನಿಕ ಸಭೆಯೊಂದಿಗೆ ಮುಕ್ತಾಯಗೊಳ್ಳಲಿದೆ. ಬಿಜೆಪಿ ಜಮ್ಮು-ಕಾಶ್ಮೀರ ಘಟಕದ ಅಧ್ಯಕ್ಷ ಸತ್ ಶರ್ಮಾ ಸಭೆಯ ಅಧ್ಯಕ್ಷತೆ ವಹಿಸಲಿದ್ದು, ರಾಜನಾಥ್ ಸಿಂಗ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಪ್ರಜಾಪ್ರಭುತ್ವ, ಸಂವಿಧಾನಿಕ ಮೌಲ್ಯಗಳು ಮತ್ತು ರಾಷ್ಟ್ರೀಯ ಏಕತೆಯನ್ನು ಬಲಪಡಿಸುವ ಉದ್ದೇಶದಿಂದ ಈ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದ ಬಳಿಕ ಅವರು ಪುಣೆಗೆ ತೆರಳಲಿದ್ದಾರೆ.

****

ಕ್ರೈಸ್ಟ್ ಚರ್ಚ್ ನ ಹ್ಯಾಗ್ಲಿ ಓವಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಭಾರತ ಮತ್ತು ನ್ಯೂಜಿಲೆಂಡ್ ನಡುವಿನ ಎರಡೇ ಟೆಸ್ಟ್ ಕ್ರಿಕೆಟ್ ಪಂದ್ಯದ ಮೊದಲ ದಿನದಾಟ ಇಂದು ಮುಕ್ತಾಯಗೊಂಡಿದೆ. ಟಾಸ್ ಸೋತು ಬ್ಯಾಟಿಂಗ್ ಗೆ ಆಹ್ವಾನ ಪಡೆದ ನ್ಯೂಜಿಲೆಂಡ್ ತಂಡ ದಿನದಾಟದ ಮುಕ್ತಾಯಕ್ಕೆ೮೫ ಓವರ್ ಗಳಲ್ಲಿ ೫ ವಿಕೆಟ್ ಕಳೆದುಕೊಂಡು ೨೪೬ ರನ್ ಕಲೆಹಾಕಿದೆ. ಅರ್ಧ ಶತಕ ಗಳಿಸಿರುವ ಟಾಮ್ ಬ್ಲಂಡೆಲ್ ಮತ್ತು ೩೬ ರನ್ ಗಳಿಸಿರುವ ಗ್ಲೆನ್ ಫಿಲಿಪ್ಸ್ ಮುರಿಯದ ೬ನೇ ವಿಕೆಟ್ ಗೆ ೬೨ ರನ್ ಗಳಿಸಿದ್ದು, ಎರಡನೇ ದಿನಕ್ಕೆ ಕ್ರೀಸ್ ಕಾಯ್ದುಕೊಂಡಿದ್ದಾರೆ. ಭಾರತ ತಂಡದ ಪರ ಆಕಾಶ್ ದೀಪ್ ೨ ವಿಕೆಟ್ ಗಳಿಸಿದರೆ, ಅಂಶುಲ್, ಗುರ್ನೂರ್ ಮತ್ತು ವಾಷಿಂಗ್ಟನ್ ತಲಾ ಒಂದು ವಿಕೆಟ್ ಪಡೆದರು.

****

ಮಧ್ಯಪ್ರದೇಶದ ಭೋಪಾಲ್ ನಲ್ಲಿ ನಡೆಯುತ್ತಿರುವ ಮಹಿಳೆಯರ ಏಷ್ಯನ್ ಹಾಕಿ ಚಾಂಪಿಯನ್ಸ್ ಟ್ರೋಫಿ ಪಂದ್ಯಾವಳಿಯ ಸೆಮಿಫೈನಲ್ ಪಂದ್ಯಗಳು ಇಂದು ನಡೆಯಲಿವೆ. ಆತಿಥೇಯ ಹಾಗೂ ಹಾಲಿ ಚಾಂಪಿಯನ್ ಭಾರತ ತಂಡ ಸಂಜೆ ೭ ಗಂಟೆಗೆ ಮಲೇಷ್ಯಾ ತಂಡವನ್ನು ಎದುರಿಸಲಿದೆ. ಇತರ ವರ್ಗೀಕರಣ ಪಂದ್ಯದಲ್ಲಿ ದಕ್ಷಿಣ ಕೊರಿಯಾ ಮಧ್ಯಾಹ್ನ ೨ ಗಂಟೆಗೆ ಥಾಯ್ಲೆಂಡ್ ವಿರುದ್ಧ

ಸೆಣಸಲಿದ್ದು, ಜಪಾನ್ ತಂಡ ಸಂಜೆ ೪.೩೦ಕ್ಕೆ ಚೀನಾ ತಂಡವನ್ನು ಎದುರಿಸಲಿದೆ. ಲೀಗ್ ಹಂತದ ಎಲ್ಲ ಐದು ಪಂದ್ಯಗಳಲ್ಲೂ ಜಯಗಳಿಸಿರುವ ಭಾರತ ತಂಡ ೧೫ ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನ ಪಡೆದಿದೆ. ಭಾರತ ಒಟ್ಟು ೨೩ ಗೋಲುಗಳನ್ನು ದಾಖಲಿಸಿದ್ದು, ಎದುರಾಳಿ ತಂಡಗಳಿಗೆ ಕೇವಲ ನಾಲ್ಕು ಗೋಲುಗಳನ್ನು ಬಿಟ್ಟುಕೊಟ್ಟಿದೆ. ಭಾರತ ಮಹಿಳಾ ತಂಡ ೨೦೧೬, ೨೦೨೩ ಮತ್ತು ೨೦೨೪ರಲ್ಲಿ ಮಹಿಳೆಯರ ಏಷ್ಯನ್ ಹಾಕಿ ಚಾಂಪಿಯನ್ಸ್ ಟ್ರೋಫಿ ಪ್ರಶಸ್ತಿ ಗೆದ್ದಿದೆ. ಇದೀಗ ಭೋಪಾಲ್‌ನಲ್ಲಿ ನಾಲ್ಕನೇ ಬಾರಿ ಪ್ರಶಸ್ತಿ ಗೆದ್ದು, ಪಂದ್ಯಾವಳಿಯ ಅತ್ಯಂತ ಯಶಸ್ವಿ ತಂಡ ಎಂಬ ಹೆಗ್ಗಳಿಕೆಗೆ ಪಾತ್ರವಾಗುವ ಅವಕಾಶ ಭಾರತಕ್ಕಿದೆ.

****

೨೦೩೬ರ ಒಲಿಂಪಿಕ್ಸ್ ಮತ್ತು ಪ್ಯಾರಾಲಿಂಪಿಕ್ಸ್ ಕ್ರೀಡಾಕೂಟಗಳನ್ನು ಭಾರತದಲ್ಲಿ ಆಯೋಜಿಸುವ ಕುರಿತ ತನ್ನ ದೃಷ್ಟಿಕೋನ ಹಾಗೂ ಪ್ರಸ್ತಾವಿತ ಕಾರ್ಯಯೋಜನೆಯನ್ನು ಭಾರತ ನಿನ್ನೆ ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಭವಿಷ್ಯದ ಆತಿಥೇಯ ರಾಷ್ಟ್ರಗಳ ಆಯೋಗದೊಂದಿಗೆ ನಡೆದ ಆನ್‌ಲೈನ್ ಸಂವಾದದಲ್ಲಿ ಮಂಡಿಸಿದೆ. ಪ್ರಸ್ತಾವಿತ ಆತಿಥೇಯ ನಗರ ಅಹಮದಾಬಾದ್‌ನ ಸಿದ್ಧತೆಗಳು, ಕ್ರೀಡಾ ಮೂಲಸೌಕರ್ಯ ಹಾಗೂ ಭಾರತೀಯ ಒಲಿಂಪಿಕ್ ಸಂಸ್ಥೆಗೆ ನಗರ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ನೀಡುತ್ತಿರುವ ಬೆಂಬಲದ ಕುರಿತು ಪ್ರಸ್ತುತಿಯಲ್ಲಿ ವಿವರಿಸಲಾಗಿದೆ.

****

ಪ್ರಧಾನಮಂತ್ರಿ ನರೇಂದ್ರ ಮೋದಿ ಇದೇ ಭಾನುವಾರ ಆಕಾಶವಾಣಿಯ 'ಮನ್ ಕಿ ಬಾತ್' ಕಾರ್ಯಕ್ರಮದ ಮೂಲಕ ದೇಶ-ವಿದೇಶಗಳ ಜನರೊಂದಿಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಲಿದ್ದಾರೆ. ಇದು ಮಾಸಿಕ ರೇಡಿಯೋ ಕಾರ್ಯಕ್ರಮದ ೧೪೦ನೇ ಸಂಚಿಕೆಯಾಗಿದೆ. ಕಾರ್ಯಕ್ರಮವು ಆಕಾಶವಾಣಿ ಮತ್ತು ದೂರದರ್ಶನದ ಎಲ್ಲಾ ಜಾಲಗಳು, ಆಕಾಶವಾಣಿ ಸುದ್ದಿ ವೆಬ್‌ಸೈಟ್ ಹಾಗೂ ನ್ಯೂಸ್‌ಆನ್‌ಏರ್ ಮೊಬೈಲ್ ಆಪ್‌ನಲ್ಲಿ ಪ್ರಸಾರವಾಗಲಿದೆ. ಅಲ್ಲದೆ, ಆಕಾಶವಾಣಿ ಸುದ್ದಿ, ಡಿಡಿ ನ್ಯೂಸ್, ಪ್ರಧಾನಮಂತ್ರಿ ಕಾರ್ಯಾಲಯ ಹಾಗೂ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಯೂಟ್ಯೂಬ್ ಚಾನೆಲ್‌ಗಳಲ್ಲಿ ನೇರ ಪ್ರಸಾರವಾಗಲಿದೆ. ಹಿಂದಿ ಪ್ರಸಾರದ ಬಳಿಕ ಪ್ರಾದೇಶಿಕ ಭಾಷೆಗಳಲ್ಲಿಯೂ ಕಾರ್ಯಕ್ರಮ ಪ್ರಸಾರವಾಗಲಿದೆ.